ದಿನಾಂಕಃ 02.12.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು: 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ ಬಿ.ಟಿ.ಎನ್. ವಕೀಲರಿಂದ:**

ಕರಾರು ಪತ್ರವನ್ನು ನೋಂದಣಿ ಮಾಡಿಕೊಳ್ಳುವ ಮುನ್ನ ಸದರಿ ಕರಾರಿನ ಸಂಬಂಧ 1 ನೇ ಪ್ರತಿವಾದಿಯ ಮನೆಯಲ್ಲಿಯೇ ಸುಮಾರು 1½ ತಿಂಗಳ ಹಿಂದೆ ಮಾತುಕತೆಯಾಗಿತ್ತು. 1 ನೇ ಪ್ರತಿವಾದಿ ಮನೆ ಇಡಕಣಿ ಗ್ರಾಮದ ಹಿರೇಬೈಲಿನಲ್ಲಿ ಇದೆ. ನನ್ನ ಹಾಗೂ ಪ್ರತಿವಾದಿಗಳ ಮನೆಗಳ ನಡುವೆ ಅಂದಾಜು 1 ಕಿ.ಮೀ ನಷ್ಟು ಅಂತರ ಇದೆ. ಈ ದಾವೆಯನ್ನು ಇಡಕಣಿ ಸ.ನಂ.257 ರ 2 ಗುಂಟೆಗೆ ಸಂಬಂಧಪಟ್ಟಂತೆ ಸಲ್ಲಿಸಲಾಗಿದೆ. ಮಾತುಕತೆಯ ಸಮಯದಲ್ಲಿ ದಾವ ಜಮೀನಿನ ದಾಖಲೆಯನ್ನು ಪ್ರತಿವಾದಿಗಳಿಂದ ಕೇಳಿ ಪಡೆದುಕೊಂಡಿರಲಿಲ್ಲ. ದಾವಾ ಸ್ವತ್ತು ಇದೆಯಾ ಎಂದು ನಾನು ಸ್ಥಳಕ್ಕೆ ಹೋಗಿ ನೋಡಿಲ್ಲ. ಮಾತುಕತೆಯಾದ ದಿನದಿಂದ ಕರಾರು ಮಾಡಿಸಿಕೊಂಡ ದಿನದವರೆಗೂ ದಾವ ಜಮೀನಿನ ಬಳಿ ಹೋಗಿ ನೋಡಿಲ್ಲ ಹಾಗೂ ಅದರ ಬಗ್ಗೆ ಯಾವುದೇ ದಾಖಲೆಗಳನ್ನು ಪರಿಶೀಲಿಸಿರಲಿಲ್ಲ. ಆ ಅವಧಿಯೊಳಗೆ ನಾನು ಚಾಸಾ-2 ರವರಿಗೆ ರೂ.2 ಲಕ್ಷ ಹಣವನ್ನು ನಗದಾಗಿ ಕೊಟ್ಟಿದ್ದೆ.

ಹಣ ಕೊಟ್ಟ ಬಗ್ಗೆ ಸ್ವೀಕೃತಿ ಪಡೆದಿಲ್ಲ. 1 ಮತ್ತು 2 ನೇ ಪ್ರತಿವಾದಿಗಳು ನನ್ನ ಸಂಬಂಧಿಕರಲ್ಲ. ನಾನು ಹೇಳಿದಂತೆ ರೂ.2 ಲಕ್ಷ ಹಣವನ್ನು ಯಾವ ದಿನಾಂಕದಂದು ಕೊಟ್ಟಿದ್ದೇನೆ ಎಂದು ನೆನಪಾಗುತ್ತಿಲ್ಲ. ನಾನು ಹೇಳಿರುವಂತೆ ರೂ.2 ಲಕ್ಷ ಹಣ ಕೊಟ್ಟ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಪ್ರತಿವಾದಿಗಳು ದಾವ ಜಮೀನನ್ನು ನನಗೆ ಮಾರಾಟ ಮಾಡುವುದಾಗಿ ಹೇಳಿದ್ದರು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ದಾವ ಜಮೀನಿನ ಸಂಬಂಧ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಕರಾರು ನೋಂದಣಿ ಮಾಡಿಸಿಕೊಟ್ಟರು ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಸದರಿ ಕರಾರುಪತ್ರದಲ್ಲಿ ಕರಾರಿನ ದಿನಾಂಕದಿಂದ 12 ತಿಂಗಳೊಳಗೆ ದಾವ ಜಮೀನಿನ ಸಂಬಂಧ ಕ್ರಯಪತ್ರ ಮಾಡಿಕೊಡುತ್ತೇವೆ ಎಂದು ಪ್ರತಿವಾದಿಗಳು ಹೇಳಿದ್ದರು ಎನ್ನುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಕರಾರು ಪತ್ರದ ದಿನಾಂಕದಿಂದ 12 ತಿಂಗಳು ಕಳೆದ ನಂತರ ನಾನು ಪ್ರತಿವಾದಿಗಳಿಗೆ ನೋಟೀಸು ಕೊಟ್ಟಿಲ್ಲ. ಕರಾರಿನ ಅವಧಿ ವಿಸ್ತೀರ್ಣ ದ ಸಂಬಂಧ ಯಾವುದೇ ಷರಾ ಬರೆಯಲಾಗಿಲ್ಲ.

ಕರಾರು ಪತ್ರದ ದಿನಾಂಕದಿಂದ 12 ತಿಂಗಳ ನಂತರದ ದಿನಾಂಕದಿಂದ ದಾವ ಸಲ್ಲಿಸುವವರೆಗೂ ಯಾಕೆ ಸುಮ್ಮನಿದ್ದೆ ಎಂದು ದಾವ ಪತ್ರದಲ್ಲಿ ಬರೆಸಿಲ್ಲ. ಸಾಕ್ಷಿಯು ಸ್ವತಃ ವಿಶ್ವಾಸದಿಂದ ಹಾಗೇ ಇದ್ದೆ ಎಂದು ನುಡಿಯುತ್ತಾರೆ. ನಿಪಿ-1 ರ ಕರಾರು ಪತ್ರವನ್ನು ನಾನು ಸೃಷ್ಟಿಸಿಕೊಂಡಿದ್ದೇನೆ ಎಂದು ಹೇಳಿ ದಿ.06.01.2023 ರಂದು 1 ನೇ ಪ್ರತಿವಾದಿ ನನ್ನ ವಿರುದ್ದ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ದೂರು ನೀಡಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. 1 ನೇ ಪ್ರತಿವಾದಿ ಖಾಸಗಿ ಪಿರ್ಯಾದನ್ನು ದಾಖ್ಲಿಸಿದ್ದು ಆ ಬಗ್ಗೆ ಮೂಡಿಗೆರೆ

This is a True Copy of the Court Records Online. Authenticated @ districts.ecourtsindia.com/cnr/KACM400012342022/truecopy/order-3.pdf

ಪೋಲಿಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು 1 ನೇ ಪ್ರತಿವಾದಿ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಪೋಲಿಸರು ಏನು ವರದಿ ಸಲ್ಲಿಸಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ. ರೂ.2 ಲಕ್ಷ ಹಣ ಪಾವತಿಸಿರುವ ಸಂಬಂಧ ಪೋಲಿಸರು ನನ್ನ ಬಳಿ ಯಾವುದೇ ದಾಖಲೆಯನ್ನು ಕೇಳಿರಲಿಲ್ಲ. ರೂ.2 ಲಕ್ಷ ಹಣ ಕೊಟ್ಟಿದ್ದೇನೆ ಎಂದು ಹೇಳಿರುವ ಸಂಬಂಧ ಈ ದಾವೆಯಲ್ಲಿ ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ದಾವ ಜಮೀನಿನ ಸಂಬಂಧ ಮೂಡಿಗೆರೆಯ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅ.ದಾ.ಸಂ.46/2022 ರಂತೆ ದಾವೆ ಬಾಕಿ ಇದೆ ಎಂದರೆ ಸರಿ. ಅ.ದಾ.ಸಂ.4/2024 ರಂತೆ 1 ಮತ್ತು 2 ನೇ ಪ್ರತಿವಾದಿಗಳು ನನ್ನ ವಿರುದ್ದ ದಾವ ಜಮೀನಿನ ಸಂಬಂಧ ದಾವೆ ಸಲ್ಲಿಸಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ.

ಮೇಲೆ ಹೇಳಿದ ಎರಡು ದಾವೆಗಳು ಹಾಗೂ ಒಂದು ಕ್ರಿಮಿನಲ್ ಪ್ರಕರಣದ ಸಂಬಂಧ ನನಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರ ಕರಾರುಪತ್ರ ನೊಂದಣಿಯಾದ ದಿನದಂದೇ 1 ಮತ್ತು 2 ನೇ ಪ್ರತಿವಾದಿಯಿಂದ ಮತ್ತೊಂದು ಜಮೀನಿನ ಕ್ರಯಪತ್ರ ಬರೆಸಿಕೊಂಡಿದ್ದೇನೆ ಎಂದರೆ ಸರಿ. ಆ ಕ್ರಯಪತ್ರ ನೋಂದಣಿಯಾಗುವ ಪೂರ್ವದಲ್ಲಿ ನಿಪಿ-1 ರ ಕ್ರಯಪತ್ರ ನೋಂದಣಿಯಾಗಿದೆ ಎಂದರೆ ಸರಿ. 1 ನೇ ಪ್ರತಿವಾದಿ ಸಹಿ ಹಾಕುವುದಿಲ್ಲ ಆದರೆ ಹೆಬ್ಬೆಟ್ಟು ಗುರುತು ಹಾಕುತ್ತಾರೆ. ನಿಪಿ-1 ನ್ನು ನೋಂದಣಿ ಮಾಡಿಸುವಾಗ ಸುನಿಲ್ ಮತ್ತು ಸುಧಾಕರ ಎನ್ನುವ ಸಾಕ್ಷಿದಾರರು ಇದ್ದರು. ಅವರಿಬ್ಬರು ಪ್ರತಿವಾದಿಗಳ ಕಡೆಯವರೇ ಆಗಿದ್ದಾರೆ. ಸಾಕ್ಷಿದಾರರನ್ನು ಒದಗಿಸುವ ಮುನ್ನ ಸದರಿರವರ ಸಂಬಂಧ ದಾಖಲೆಗಳನ್ನು ಒದಗಿಸಿದ್ದೆ ಎಂದರೆ ಸರಿ. ಕರಾರು ನೋಂದಣಿ ಯಾಗುವ ಕಾಲಕ್ಕೆ ದಾವ ಜಮೀನಿನ ದಾಖಲೆಗಳನ್ನು 2 ನೇ ಪ್ರತಿವಾದಿಯೇ ಒದಗಿಸಿದ್ದರು. ಕರಾರು ಪತ್ರವನ್ನು 2 ನೇ ಪ್ರತಿವಾದಿಯೇ ಭಾಗ್ಯ ನಾರಾಯಣ್ ರವರಿಂದ ತಯಾರು ಮಾಡಿಸಿಕೊಂಡು ಬಂದಿದ್ದರು.

ನಿಪಿ-1 ನ್ನು ಮೊದಲ ಬಾರಿಗೆ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ನಾನು ನೋಡಿದ್ದೇನೆ. ಆ ರೀತಿ ನೋಂದಣಿಯಾಗುವ ಮುನ್ನವೇ ಅದನ್ನು ನೋಡಿದ್ದೆ. ಕರಾರುಪತ್ರವನ್ನು ಓದಿ ನೋಡಿದ ನಂತರವೇ ನಾನು ಅದಕ್ಕೆ ಸಹಿ ಮಾಡಿದ್ದೆ. ಸದರಿ ಕರಾರು ಪತ್ರಕ್ಕೆ ಉಪನೋಂದಣಾಧಿಕಾರಿಗಳ ಎದುರು ಸಹಿ ಮಾಡಿದ್ದೇನೆ. ಆ ಸಮಯಕ್ಕೆ ಹೆಸರು ಕರೆದವರು ಬರುತ್ತಿದ್ದರು. ಕರಾರು ನೋಂದಣಿ ಸಂಬಂಧದ ಶುಲ್ಕವನ್ನು 2 ನೇ ಪ್ರತಿವಾದಿಯೇ ಪಾವತಿಸಿದ್ದರು. ರಶೀದಿ ಮತ್ತು ಕರಾರು ಪತ್ರವನ್ನು 2 ನೇ ಪ್ರತಿವಾದಿ ಮತ್ತು ಅವರ ವಕೀಲರು ಉಪನೋಂದಣಾಧಿಕಾರಿರವರ ಮುಂದೆ ಸಲ್ಲಿಸಿದ್ದರು. ಕರಾರುಪತ್ರ ಮತ್ತು ಕ್ರಯಪತ್ರವನ್ನು ಒಂದಾದ ನಂತರ ಮತ್ತೊಂದರ ಹಾಗೇ ಉಪನೋಂದಣಾಧಿಕಾರಿಗಳ ಮುಂದೆ ಹಾಜರುಪಡಿಸಲಾಗಿದೆ. ಆ ಸಮಯಕ್ಕೆ 1 ಮತ್ತು 3 ನೇ ಪ್ರತಿವಾದಿಯು ಸಹಾ ನಮ್ಮೊಂದಿಗೆ ಇದ್ದರು. ಪೋಟೋ ಮತ್ತು ಹೆಬ್ಬೆಟ್ಟಿನ ಗುರುತುನ್ನು ಒಟ್ಟಿಗೆ ಪಡೆಯಲಾಗಿದೆ. ಈ ರೀತಿ ಕ್ರಯಪತ್ರಕ್ಕೆ ಮೊದಲು ಪಡೆದು ಆನಂತರ ಕರಾರುಪತ್ರಕ್ಕೆ

This is a True Copy of the Court Records Online. Authenticated @ districts.ecourtsindia.com/cnr/KACM400012342022/truecopy/order-3.pdf

ಪಡೆಯಲಾಗಿದೆ.

<u>ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

www.ecourtsindia.com
This is a True Copy of the Court Records Online. Authenticated @ districts.ecourtsindia.com/cnr/KACM400012342022/truecopy/order-3.pdf